ಅದನ್ನು ಮೆಟ್ಟಿ ನಿಲ್ಲುವ ಮನೋಸ್ಥೈರ್ಯ ಬೇಕಷ್ಟೆ.

ಕುಮುದಿನಿ ಮೈ ತುಂಬಿ ಹರಿದಳು. ಒಂದು ವಾರಕ್ಕೆ ಅಲ್ಲಿನ ಮಳೆ ಅಭ್ಯಾಸವಾಯಿತು. ಇವರಿಗೆ ಅದು ಹಳತೆನಿಸಿತು. ಕೆಲವು ಗಿಡಗಳು ಕೊಳೆತು ಬಿದ್ದರೂ, ಇವರ ಮನೋಬಲ ಕೊಳೆಯಲಿಲ್ಲ. ಕಾಡಿಗೆ ಹೋಗಿ, ದೊಡ್ಡ ಎಲೆಗಳನ್ನು ತಲೆಯ ಮೇಲೆ ಹಿಡಿದೇ ಅಲೆದಾಡಿ ಮನೆಯ ಮಾಡಿಗೆ ಬೇಕಾದ ಗರಿಗಳನ್ನ ಕಿತ್ತು ತಂದು ಹಾಕಿ, ಮನೆಯ ಮಾಡು ಸೋರದಂತೆ ತಡೆ ಹಿಡಿಯುವಲ್ಲಿ ಯಶಸ್ವಿಯಾದರು. ಮತ್ತೆ ಒಲೆಗೆ ಬೆಂಕಿ ಹಚ್ಚಿ ಬೆಚ್ಚಗೆ ಮಾಡಿಕೊಂಡರು. ಮಣ್ಣಿನ ಇಟ್ಟಿಗೆ ತಯಾರಿಸಿ, ಒಲೆಯಲ್ಲಿ ಕಾಯಿಸಿ ಗಟ್ಟಿ ಮಾಡಿ ಮನೆ ಹೊಸ್ತಿಲಿಗೆ ದಂಡೆ ಕಟ್ಟಿ ನೀರು ಒಳಗೆ ಹರಿಯದಂತೆ ನೋಡಿಕೊಂಡರು. ತಂತಮ್ಮ ಅನುಕೂಲಕ್ಕೆ ಬೇಕಾದ ಪರ್ಯಾಯ ವ್ಯವಸ್ಥೆಗಳನ್ನು, ಮಾಡಿಕೊಂಡಾಗ, ಬದುಕೇನೂ ಕಠಿಣವೆನಿಸಲಿಲ್ಲ. ಬದಲಿಗೆ ಸಹ್ಯವೆನಿಸತೊಡಗಿತು. ಕಾಯಕನಾಥ ಎಂಥ ಮಳೆಯಾಗಲೀ, ಚಳಿಯಾಗಲೀ ಅವನು ಮಾತ್ರ ಜಂಪಯ್ಯನ ಮನೆಯೊಳಗೆ ಕಾಲಿಡಲಿಲ್ಲ. ಅವನು ತನ್ನ ನಿಲುವಿಗೆ ಬದ್ಧನಾಗಿಯೇ ಇದ್ದ.

'ನಿಂದೇನೋ ಹಠ..? ಮಳೆಗಾಲ ಕಳೆಯುವ ತನಕವಾದರೂ ಒಳಗೆ ಬಂದು ಇರಬಾರದೇ..? ನಾವೇನೂ ಹೊರಗಿನವರಾ..? ನಾವೆಲ್ಲರೂ ಒಂದೇ ಇಲ್ಲಿ ಪ್ರಕೃತಿಯ ಅಡಿಯಲ್ಲಿ.. ಅದರ ಮುಂದೆ ಜಾತಿ, ಮತ, ಮನುಷ್ಯ, ಪ್ರಾಣಿ ಎಲ್ಲವೂ ಒಂದೇ..! ಯಾವ ಭೇಧಭಾವನೂ ಇಲ್ಲ..!'

'ಛೆ..ಛೆ.. ಹಾಗಲ್ಲ.. ನಾನು ಹೊರಗೇ ಇರಬೇಕು ಅಂತ ನಿರ್ಧಾರ ಮಾಡಿದೀನಿ.. ಇದು ನನಗೆ ನಾನೇ ವಿಧಿಸಿಕೊಂಡ ಒಂದು ಕಟ್ಟಳೆ. ದಯವಿಟ್ಟು ಅರ್ಥ ಮಾಡಿಕೊಳ್ಳಿ.. ನಾನು ಎಲ್ಲಾ ಸುಖ ಸೌಕರ್ಯಗಳನ್ನು ವರ್ಜಿಸಿದ್ದೇನೆ. ಅಗಲಿದ ನನ್ನ ಪ್ರೀತಿಪಾತ್ರರಿಗೆ ನಾನು ಕೊಡುವ ಒಂದು ಶ್ರದ್ಧಾಂಜಲಿ ಇದು.. ನನ್ನ ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳಬೇಕು.. ನಿಮ್ಮ ಕಾಳಜಿ ನನಗೆ ಅರ್ಥವಾಗುತ್ತೆ.. ಆದರೆ.. ನನಗೆ ನನ್ನ ಪಾಡಿಗೆ ಇರಲು ಬಿಟ್ಟುಬಿಡಿ..' ಕಾಯಕನಾಥ ಕೈಮುಗಿದು ವಿನಂತಿಸಿಕೊಂಡ.

ಅವನ ಹಿನ್ನಲೆ ಅರಿವಿದ್ದ ಕಾರಣ ಯಾರೂ ಒತ್ತಾಯಿಸಲು ಹೋಗಲಿಲ್ಲ. ರತ್ನನಿಗೆ ಏಕೋ ಕಾಯಕನಾಥನ ಬಗ್ಗೆ ಒಂದು ಹಿಡಿ ಅಕ್ಕರೆ ಜಾಸ್ತಿ. 'ಪ್ರೀತಿ ಅಂದರೆ ಇದು ನೋಡು.. ಅವನು ಸತ್ತ ಹೆಂಡ್ತಿಗಾಗಿ ವ್ರತ ಮಾಡಿದಂತೆ ನಿಯಮ ಹೇರಿಕೊಂಡ. ನೀನೂ ಇದೀಯ..' ಎಂದು ತನ್ನ ಪತಿಗೆ ಮೂದಲಿಸಿದಳು. ರೊಟ್ಟಿ ಅಗಿಯುತ್ತಿದ್ದ ಶಿವಯ್ಯ ಅಂದ, 'ನೀನು ಹೋದ್ರೆ ನಾನೂ ಮಾಡ್ತೀನಮ್ಮೀ.. ನೀನು ಮೊದಲು ಹೊರಡುವುದನ್ನು ನೋಡು..' ಎಂದ. ಕೈಯಲ್ಲಿದ್ದ ಸೌಟನ್ನು ಶಿವಯ್ಯನ ಕಡೆ ಬೀಸಿದ ರತ್ನ, 'ಗೊತ್ತು ಕಣೋ.. ನಾನು ಹೋಗೋದನ್ನೇ ಕಾಯ್ತಾ ಇದೀಯಾ ಅಂತ.. ನೀವು ಗಂಡಸರೇ ಇಷ್ಟು..' ಎಂದು ರೌದ್ರಾವತಾರ ತಾಳಿದಳು. ಶಿವಯ್ಯ 'ಅಯ್ಯೋ .. ತಮಾಷೆಗೆ ಹೇಳಿದೆ ಕಣೇ..ನೀನೊಳ್ಳೇ ದುರ್ಗಿ ಮೈ ಮೇಲೆ ಬಂದವ್ಳ ಥರ ಆಡ್ಬೇಡಾ..' ಎಂದ.

'ಹೋಗು.. ಈ ಬಿಸಿ ರೊಟ್ಟಿ ಆ ಕಾಯಂಗೆ ಕೊಡು.. ತಿನ್ನಲಿ..' ಶಿವಯ್ಯನ ಮನಸ್ಸಲ್ಲೂ ಕಲ್ಮಷ ಇರಲಿಲ್ಲ. ಎದ್ದು ಹೋಗಿ ಕಾಯಕನಾಥನಿಗೆ ರೊಟ್ಟಿ ಕೊಟ್ಟು ಬಂದ.

### ಅಧ್ಯಾಯ 8

ಬದಲಾವಣೆ ಜಗದ ನಿಯಮ. ಸ್ಥಿತ್ಯಂತರಕ್ಕಷ್ಟೇ ಬದುಕನ್ನು ಹೊಸದರಂತೆ ಸ್ವೀಕರಿಸುವ, ಖುಷಿಯಿಂದ ಅನುಭವಿಸುವ, ರೂಢಿಸಿಕೊಳ್ಳುವ ಮನಸ್ಥಿತಿ ಒದಗಿಸುತ್ತದೆ. ಹೀಗೆ ಅಜ್ಜರಕಾಡಿನಲ್ಲೂ ಒಂದಷ್ಟು ಬದಲಾವಣೆಯ ಗಾಳಿ ಬೀಸಿತು. ಈಗ ಎಂಟು ಮನೆಗಳು ಅಜ್ಜರಕಾಡಿನಲ್ಲಿ ಬಂದು ನೆಲೆಸಿವೆ. ಸಣ್ಣದಾಗಿ ಜೋಪಡಿಗಳನ್ನು ಕಟ್ಟಿಕೊಂಡು ಬದುಕು ಸಾಗಿಸುತ್ತಿವೆ. ಹತ್ತಿರದ ಕಾಡು, ಅವರ ಜೀವನಕ್ಕೆ ಆಧಾರವಾಗಿ ನಿಂತಿದೆ. ಕಾರಗದ್ದೆಯಲ್ಲಿ ಜೀವನ ನಿರ್ವಹಿಸಲು ಪರದಾಟ ಪಡುತ್ತಿದ್ದವರು, ಸ್ವಂತ ನೆಲೆ ಬೇಕೆಂದು ಬಯಸುತ್ತಿದ್ದವರು ಹೇಗೋ ಬಂದು ಇಲ್ಲಿ ಜೀವನ ಸಾಗಿಸಲು ಆರಂಭಿಸಿದ್ದಾರೆ. ಜಂಪಯ್ಯ, ಶಿವಯ್ಯ ಈಗ ತಮ್ಮ ಕೃಷಿಯಲ್ಲಿ ಬೆಳೆಸಿದ್ದ ಹಣ್ಣು, ಹೂಗಳನ್ನು ಹೋಗಿ ಮಾರಿ ಒಂದಷ್ಟು ಆರ್ಥಿಕ ಚೇತರಿಕೆ ಕಾಣಲಾರಂಭಿಸಿರುವುದು, ಅಜ್ಜರಕಾಡಿಗೆ ಬದುಕು ಅರಸಿಕೊಂಡು ಬಂದವರಿಗೆ ಮಾದರಿಯಾಗಿದೆ. ಅವರೂ ತಮಗೆ ಬೇಕಾದಂತೆ ಜಾಗ ಅತಿಕ್ರಮಿಸಿ ಏನೋ ತೋಚಿದ ಗಿಡ ನೆಟ್ಟು ಬೆಳೆಸುವ ಯತ್ನ ಮಾಡಿದರೆ, ಇನ್ನು ಕೆಲವರು ಕಾರಗದ್ದೆಗೆ ಹೋಗಿ ಕೂಲಿನಾಲಿ ಮಾಡಿಕೊಂಡು ಮರಳಿ ಮತ್ತೆ ಇಲ್ಲಿ ಬಂದು ವಾಸಿಸುತ್ತಾರೆ. ಜಂಪಯ್ಯನೇ, ಆ ಜಾಗದ ಮೇಲುಸ್ತುವಾರಿ ನಡೆಸುತ್ತಾನೆ. ಅವನೇ ಮುಖಂಡನಾಗಿದ್ದಾನೆ. ಸದ್ಯಕ್ಕೆ ಅವನ ಮಾತೇ ಶಾಸನವಾಗಿದೆ. ಉಚಿತವಾಗಿ ದಕ್ಕಿದೆ ಎಂದು ಮನಬಂದಂತೆ ಅಲ್ಲಿ ವರ್ತಿಸಲು ಸಾಧ್ಯವಾಗದಂತೆ ಜಂಪಯ್ಯ ಕಟ್ಟುನಿಟ್ಟಾಗಿ ನೋಡಿಕೊಂಡಿದ್ದಾನೆ. ಅಲ್ಲಿ ಎಲ್ಲರಲ್ಲೂ ಒಗ್ಗಟ್ಟಿದೆ. ಖುಷಿ ಇದೆ. ಸೌಹಾರ್ದತೆ ಇದೆ. ಸುಂದರ, ಸ್ವಚ್ಛ ಮಾದರಿ ಗ್ರಾಮದಂತಾಗಿದೆ. ಎಲ್ಲರಿಗೂ ಈಗ ಮನೆಯ ಜೊತೆ ಶೌಚ ಕಟ್ಟಿಕೊಳ್ಳುವುದು ಅಲ್ಲಿ ಕಡ್ಡಾಯ ನಿಯಮವಾಗಿದೆ. ಹಾಗಾಗಿ ಗ್ರಾಮ ನಿರ್ಮಲವಾಗೇ ಇದೆ. ನೀರಿನ ತೊಟ್ಟಿ ಎಲ್ಲರ ಶ್ರಮ ದಾನದಿಂದ ಈಗ ಹಿರಿದಾಗಿದೆ. ಅದನ್ನು ಸಾರ್ವಜನಿಕರ ಅನುಕೂಲತೆಗೆ ತಕ್ಕಂತೆ ಪರಿವರ್ತಿಸಲಾಗಿದೆ.

ಇವರಿಂದ ಸ್ಥಳದಿಂದ ಸೇತುವೆಯ ತನಕವೂ ಒಂದು ಕಿರಿದಾದ ಮಣ್ಣಿನ ರಸ್ತೆ, ಅಡ್ಡಾಡಲು ನಿರ್ಮಿಸಲಾಗಿತ್ತು. ಜಂಪಯ್ಯ ಸ್ಥಾಪಿಸಿದ ನದಿಯ ಬದಿಯ ಮರದಡಿಯ ಲಿಂಗದ ಕಲ್ಲಿಗೆ ಸಣ್ಣ ಚಪ್ಪರ ಬಂದಿದೆ. ಜಂಪಯ್ಯ ಈಗಲೂ ಹೋಗಿ ಆ ಕಲ್ಲಿಗೆ ಕೈ ಮುಗಿದು ಬರುತ್ತಿದ್ದ. ಅವನನ್ನು ನೋಡಿ ಉಳಿದ ಗ್ರಾಮಸ್ಥರಿಗೂ ಅದು ಅಭ್ಯಾಸವಾಗಿತ್ತು. ಕೆಲವರು ನಿತ್ಯವೂ ಆ ಕಲ್ಲಿಗೆ ಹೂ ಇಡುತ್ತಿದ್ದರು. ಕೆಲವರು ಇನ್ನೂ ಮುಂದಕ್ಕೆ ಹೋಗಿ ಕರ್ಪೂರ, ದೀಪ ಹಚ್ಚುತ್ತಿದ್ದರು. ಬೇಡಿಕೆ ಸಲ್ಲಿಸುತ್ತಿದ್ದರು. ಇನ್ನು ಅಜ್ಜರಕಾಡಿನಲ್ಲಿ ಈಗ ಆಟಕ್ಕೂ ಒಂದು ಸಣ್ಣ ಮೈದಾನ ನಿಗದಿಯಾಗಿತ್ತು. ಚಿಕ್ಕ ಮಕ್ಕಳು ಬೆರಳೆಣಿಕೆಯವರಾದರೂ ಆ ಬಯಲಿಗೆ ಇದೆಲ್ಲ ಚಟುವಟಿಕೆಗಳಿಂದ ಒಂದು ಕಳೆ ಬಂದಿತ್ತು.

ಎಲ್ಲರೂ ದಿನಗೂಲಿಯನ್ನೇ ಹೆಚ್ಚಾಗಿ ನಂಬಿ ಬದುಕುವ ಜನ. ಕಾರಗದ್ದೆಗೆ ಹೋಗಿ ದುಡಿದು ಹಿಂತಿರುಗುವಾಗ ರಾತ್ರಿಯಾಗುತ್ತಿತ್ತಾದ್ದರಿಂದ ಒಟ್ಟಾಗಿ ಸೇರುತ್ತಿದ್ದದ್ದು ವಾರದ ರಜೆಯ ದಿನದಂದು. ವಾರಕ್ಕೆ ಬೇಕಾಗುವಷ್ಟು ತರಕಾರಿ, ದಿನಸಿ ತಂದರೆ ಮುಗಿಯಿತು. ಹಾಲಿಗೆ ಹೆಚ್ಚಾಗಿ ಪುಡಿಯನ್ನೇ ಬಳಸುತ್ತಿದ್ದದ್ದು. ಕಾಯಕನಾಥ ಮಾತ್ರ ಶಿವಣ್ಣ ಮತ್ತು ಜಂಪಯ್ಯನ ಜೊತೆ ಅವರ ಕ್ರಷಿಯಲ್ಲಿ ಸಹಾಯಕನಾಗಿದ್ದ. ಇಲ್ಲಿ ಬಂದ ಫಲಗಳನ್ನು ಚೀಲಕ್ಕೆ ತುಂಬಿ ಹೊತ್ತು ಸೇತುವೆಯ ತನಕ ಒಯ್ಯುವುದು ಮಾಡುತ್ತಿದ್ದ. ಅವನೆಂದೂ ಸೇತುವೆ ದಾಟಿ ಮೇಲೇರಿ ಹೋಗಿರಲಿಲ್ಲ. ಕಾರಗದ್ದೆ ಹೇಗಿದೆ ಎಂದು ಕಂಡಿರಲಿಲ್ಲ. ಅದರ ಸಹಜ ಕುತೂಹಲವೂ ಅವನಿಗಿರಲಿಲ್ಲ. ಅವನ ಸ್ವಭಾವದಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. ಅವನು ಇಡೀ ಗ್ರಾಮದ ಜೊತೆಗಿದ್ದೂ ಕೂಡಾ ಒಳಗಿನಿಂದ ಏಕಾಂಗಿ. ಅಲ್ಲಿ ಸೇರಿದ್ದ ಗ್ರಾಮಸ್ಥರನ್ನು ಕಾಣುವಾಗ ಅವನಲ್ಲೂ ಏನೇನೋ ಆಲೋಚನೆ ಬರುತ್ತಿತ್ತು. ಇಲ್ಲಿರುವ ಜನ ಜೀವನಕ್ಕಾಗಿ, ಬದುಕಲ್ಲಿ ಸಂತಸ ತರಲು, ನೆಮ್ಮದಿಗಾಗಿಯೋ ಎಲ್ಲೆಲ್ಲೋ ಅಡ್ಡಾಡುತ್ತಾರೆ. ಹುಡುಕುತ್ತಾರೆ. ಆದೂ ಅಸಂತೃಪ್ತಿಯಿಂದ ಬೇಯುತ್ತಾರೆ. ಇನ್ನೂ ಏನೋ ಕೊರತೆ ಕಾಣುತ್ತಾರೆ. ಎಲ್ಲರೂ ಒಂದರ್ಥದಲ್ಲಿ ಏನೋ ಹುಡುಕಾಟದಲ್ಲಿ ತೊಡಗಿ ಕೊಂಡವರೇ..! ತನ್ನನ್ನೂ ಸೇರಿ..! ಅದಕ್ಕೆ ನೆಮ್ಮದಿ, ಸುಖ, ಸಂತೃಪ್ತಿ ಎಂದು ಹೆಸರಿಟ್ಟುಕೊಂಡು ಎಲ್ಲೆಡೆ ಅರಸುವ ನಾವು ಅದು ನಮ್ಮೊಳಗೇ ಇದೆ ಎಂಬುದನ್ನು ಮರೆಯುತ್ತೇವೆ. ಒಳಗೆ ಕಾಣುವುದನ್ನು ಬಿಟ್ಟು ಹೊರಗೆಲ್ಲಾ ಅರಸುತ್ತೇವೆ. ಹುಡುಕುತ್ತಾ ಸವೆಸಿಬಿಡುತ್ತೇವೆ. ನಿಜವಾದ ಅರ್ಥ ಕಂಡುಕೊಳ್ಳುವಲ್ಲಿ ಸೋತು ಬಿಡುತ್ತೇವೆ.

ಕಾಯನಿಗೆ ಬರೀ ಇಂಥ ಆಲೋಚನೆಗಳದ್ದೇ ಗುಂಗು. ಅವನು ಹೊರಗೆ ಮಾತನಾಡುವುದಕ್ಕಿಂತಲೂ ಒಳಗೆ ಮಾತನಾಡಿದ್ದೇ ಹೆಚ್ಚು. ಮೌನ, ಮನಸ್ಸಿನೊಂದಿಗೆ ಮಂಥಿಸಿ ಮಾಗಿಸುತ್ತಿತ್ತು. ಅವನು ತನ್ನದೇ ಭಾವಕೋಶದಲ್ಲಿ ನೆಲೆಸಿದ್ದ. ಅಲ್ಲೇ ಅಲೆದಾಡುತ್ತಿದ್ದ. ಬೀಳುತ್ತಿದ್ದ. ಹೊರಳಾಡುತ್ತಿದ್ದ. ಅದೇ ಅವನಿಗೆ ಅಭ್ಯಾಸವಾಗಿತ್ತು. ಶಿವಣ್ಣನ ಹೆಂಡತಿ ರತ್ನ ಅವನಿಗೆ ಈಗ ಯೋಗಿ ಎಂದೇ ಕರೆಯುತ್ತಿದ್ದಳು. ಅವಳಿಗೆ ಅವನ ಮೇಲೆ ವಿಪರೀತ ಗೌರವ. 'ಅವನೊಬ್ಬ ಯೋಗಿ.. ಕಾಯಕ ಮತ್ತು ಮೌನ.. ಇಷ್ಟೇ ನೋಡು ಅವನ ಜೀವನ.. ಯಾರ ತಂಟೆ ತಕರಾರಿಗೂ ಅವನಿಲ್ಲ.. ಅವನು ಮಾತೇ ಮರೆತು ಬಿಟ್ಟಿದ್ದಾನೆ ಅನ್ಸುತ್ತೆ..' ರತ್ನ ನುಡಿಯುತ್ತಿದ್ದಳು.

ಅವಳ ಮಗ ವೀರಭದ್ರ ಆಗಾಗ ಕಾರಗದ್ದೆಯಿಂದ ಬರುತ್ತಿದ್ದ. ಹಾಗೆ ಬರುವಾಗ ಅಕ್ಕಿ, ಬೇಳೆ ಒಂದಷ್ಟು ತರಕಾರಿ ತರುವುದು ಮರೆಯುತ್ತಿರಲಿಲ್ಲ. ಹಾಗಾಗಿ ಇವರಿಗೆ ಅಲ್ಲಿಗೆ ಹೋಗಿ ಬರುವ ತಾಪತ್ರಯ ತಪ್ಪುತ್ತಿತ್ತು. ಅ ಭಾನುವಾರ ಬಂದವನು ಹೊಸ ಸುದ್ದಿ ಹಿಡಿದು ಬಂದಿದ್ದ. 'ಅವ್ವ.. ಕಮಲಿ ಚಿಕ್ಕಮ್ಮನ